**ಗುರುಪ್ರಸಾದ್ ಕಂಟಲಗೆರೆ**
ಕಲೆ: ವೆಂಕಟ್ರಮಣ ಭಟ್

# ಇವ ನಮ್ಮವ



ಸಾವಿತ್ರಿಯದು ಗಂಡ ಎರಡು ಮಕ್ಕಳಿರುವ ಚಿಕ್ಕ ಸಂಸಾರವಾದರೂ, ಗಂಡ ಹೆಂಡತಿ ಇಬ್ಬರೂ ನೌಕರರಾಗಿರುವುದರಿಂದ ಒತ್ತಡದ ಬದುಕು. ಅದೂ ಅಲ್ಲದೆ ಈಗಷ್ಟೆ ಮಕ್ಕಳ ಕಾನ್ವೆಂಟ್ ವಿದ್ಯಾಭ್ಯಾಸಕ್ಕೆಂದು ಸಂಬಂಧಗಳ ಸಂದಣಿಯ ಹಳ್ಳಿಯ ಮನೆಯನ್ನು ತೊರೆದು ನಗರದಲ್ಲಿ ಬಾಡಿಗೆ ಮನೆ ಹಿಡಿದು ದಿನ ದೂಕುತ್ತಿರುವ ಸಂದಿಗ್ಧ ಅವರಿಗೆ. ಬೆಳಗ್ಗೆ ಎಷ್ಟೇ ಬೇಗನೆ ಎದ್ದರೂ ಕಸ ಮುಸ್ರೆ ತೆಗೆದು, ನೀರು ನಿಡಿ ಹಿಡಿದು, ತರಕಾರಿ ಹೆಚ್ಚಿ ತಿಂಡಿ ರೆಡಿ ಮಾಡಿ, ಇನ್ನೂ ಮಲಗಿರುವ, ಎದ್ದರೆ ಸದಾ ಆಡುವ ಗ್ಯಾನದಲ್ಲೆ ಇರುವ ಮಕ್ಕಳಿಗೆ ತೊಳೆದು ಬಳಿದು ತಿನ್ನಿಸಿ, ಅವರ ಸ್ಕೂಲ್ ಬ್ಯಾಗು, ಲಂಚ್ ಬ್ಯಾಗು ಎಂದು ಎರಡೆರೆಡು ರೆಡಿ ಮಾಡಿ, ಯೂನಿಫಾರ್ಮ್ ಶೂ ಹಾಕಿ ಸ್ಕೂಲ್ ವ್ಯಾನ್‌ಗೆ ಹತ್ತಿಸಿ, ಸಾವಿತ್ರಿ ತಾನೂ ಬಸ್ ಹಿಡಿದು ಆಫೀಸ್‌ಗೆ ಹೋಗುವವಷ್ಟರಲ್ಲಿ ಅದಾಗಲೆ ಆಫೀಸ್‌ನ ಎದುರುಗಡೆ ಗೋಡೆಯಲ್ಲಿರುವ ಗಡಿಯಾರದ ಮುಳ್ಳು ಇವತ್ತೂ ಹತ್ತು ಹದಿನೈದು ನಿಮಿಷ ತಡ ಎಂಬುದನ್ನ ಎಂದಿನಂತೆ ಸೂಚಿಸುತ್ತಲೇ ಇರುತ್ತದೆ.

ಇನ್ನು ಸಂಜೆ ಆಫೀಸ್ ಟೈಮ್ ಮುಗಿಯುವುದಕ್ಕಿಂತ ಮುಂಚಿತವಾಗಿಯೇ ಗಂಟೆ ಹೊಡೆದಂತೆ ಸಂಜೆ ನಾಲ್ಕಕ್ಕೆ ಸರಿಯಾಗಿ ಸ್ಕೂಲ್ ವ್ಯಾನ್ ಬಂದು ಮಕ್ಕಳನ್ನು ಬೀಗ ಹಾಕಿರುವ ಮನೆಯ ಮುಂದೆ ಇಳಿಸಿರುವುದು, ಅವು ಪಕ್ಕದ ಮನೆಯವರ ಕಾಂಪೌಂಡ್ ಒಳಗೆ ಬ್ಯಾಗ್ ಎಸೆದುಕೊಂಡು ಆಡುತ್ತಿರುವುದು, ಕಿರಿಯವನು ಬಹುತೇಕ ಮಧ್ಯಾಹ್ನದ ಲಂಚ್ ಬ್ಯಾಗ್ ಖಾಲಿ ಮಾಡದೆ ಹಸಿದುಕೊಂಡು ಬಂದಿರುವುದು ಇವೆಲ್ಲ